**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/03/ಇಎಸ್ ಟಿ(8)/2025

ಆಯುಕ್ತರ ಕಚೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 01, ದಿನಾಂಕ 05.07.2025

**ಸುತ್ತೋಲೆ**

**ವಿಷಯ :** 2025 ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ಭೋದಕರ ವರ್ಗಾವಣೆ ಸಂಬಂಧ ಗಣಕೀಕೃತ ಆನ್‌ಲೈನ್ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿನಾಂಕ: 29-01-2021 ರಂತೆ ಅಧಿಸೂಚಿಸಲಾದ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ ನಿಯಮಗಳು-2021 ಹಾಗೂ ತಿದ್ದುಪಡಿಗಳು
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿ:03-04-2025 ಹಾಗೂ ದಿ:21-04-2025.
3. ಈ ಕಛೇರಿ ಪ್ರಕಟಣೆ ಸಂಖ್ಯೆ: ಡಿಟಿಇ 03 ಇಎಸ್‌ಟಿ (8) 2025 ದಿ:19-05-2025.
4. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 03 ಇಎಸ್‌ಟಿ (8) 2025 ದಿ:10-06-2025
5. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 03 ಇಎಸ್‌ಟಿ (8) 2025 ದಿ:27-06-2025
6. ಸರ್ಕಾರದ ಅನಧಿಕೃತ ಟಿಪ್ಪಣಿ ಸಂ:ಸಿಆಸುಇ55ಸೇವನ 2025 ದಿ:11.06.2025
7. ಸರ್ಕಾರದ ಪತ್ರ ಸಂ. ಇಡಿ 162 ವಿವಿಧ 2025 ದಿ:26.06.2025
8. ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:01.07.2025

*****

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರ (ಪ್ರಾಧ್ಯಾಪಕರು, ಸಹ/ಸಹಾಯಕಪ್ರಾಧ್ಯಾಪಕರು(ಗ್ರೂಪ್-ಎ), ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಬಿ), ಗ್ರಂಥಪಾಲಕರು ಮತ್ತು ಕ್ರೀಡಾ & ದೈಹಿಕ ಶಿಕ್ಷಣ ನಿರ್ದೇಶಕರು), ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಬೋಧಕರ ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ಅನ್ನು ರೂಪಿಸಿ ಅಧಿಸೂಚಿಸಲಾಗಿರುತ್ತದೆ.

ಉಲ್ಲೇಖ (8) ರಂತೆ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ಹಾಗೂ ಕಡ್ಡಾಯ ವರ್ಗಾವಣೆಗೆ ಒಳಪಡುವ ಬೋಧಕರ ವಲಯವಾರು ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸಿದ್ದು, ದಿನಾಂಕ:08-07-2025 ರಿಂದ ಗಣಕೀಕೃತ ಆನ್‌ಲೈನ್ ಕೌನ್ಸಿಲಿಂಗ್ ನಡೆಸಲು ಉದ್ದೇಶಿಸಲಾಗಿದೆ. Online Transfer Counselling ಪ್ರಕ್ರಿಯೆಗೆ ಸಂಬಂಧಿಸಿದಂತೆ ಬೋಧಕರು ಈ ಕೆಳಕಂಡ ಅಂಶಗಳನ್ನು ಪರಿಗಣನೆಯಲ್ಲಿ ಇಟ್ಟುಕೊಂಡು ಕೌನ್ಸಿಲಿಂಗ್‌ನಲ್ಲಿ ಪಾಲ್ಗೊಳ್ಳುವಂತೆ ಸೂಚಿಸಲಾಗಿದೆ.

Scanned with CamScanner

1. ಬೋಧಕರು ತಮ್ಮ ಕಾಲೇಜಿನ ಲಾಗಿನ್ ಮೂಲಕ ಅಥವಾ ವೈಯಕ್ತಿಕ ಲಾಗಿನ್ ಮೂಲಕ ಕೌನ್ಸಿಲಿಂಗ್ ನಲ್ಲಿ ಪಾಲ್ಗೊಳ್ಳುವುದು.

2. ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ನಿಯಮಾನುಸಾರ ಪ್ರಸ್ತುತ ಖಾಲಿ ಇರುವ ವಿಷಯವಾರು ಹುದ್ದೆಗಳಲ್ಲಿ ನಿಗದಿಪಡಿಸಿರುವ ಕನಿಷ್ಠ ಅಥವ ಅದಕ್ಕಿಂತ ಹೆಚ್ಚು ಕಾರ್ಯಭಾರವಿರುವ ಹುದ್ದೆಗಳನ್ನು ಮಾತ್ರ ಕೌನ್ಸಿಲಿಂಗ್‌ನಲ್ಲಿ ಪ್ರದರ್ಶಿಸಲಾಗುವುದು.

3. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವಲಯವಾರು ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಶೇ.75% ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಹಾಗೂ ಶೇ.25% ರಷ್ಟು ಹುದ್ದೆಗಳನ್ನು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಿರಿಸಲಾಗಿರುತ್ತದೆ.

4. ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಶೇ.8% ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಹಾಗೂ ಶೇ.92% ರಷ್ಟು ಹುದ್ದೆಗಳನ್ನು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಿರಿಸಲಾಗಿರುತ್ತದೆ.

5. ಕಲ್ಯಾಣ ಕರ್ನಾಟಕ ಮತ್ತು ಬೆಂಗಳೂರು ನಗರವನ್ನು ಹೊರತುಪಡಿಸಿ ಉಳಿದ ಪ್ರದೇಶಗಳಲ್ಲಿರುವ ಮಂಜೂರಾದ ಹುದ್ದೆಗಳಲ್ಲಿ ಶೇ.100% ರಷ್ಟು ಹುದ್ದೆಗಳು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಾಗಿರುತ್ತದೆ.

6. ಕೌನ್ಸಿಲಿಂಗ್ ಸಂದರ್ಭದಲ್ಲಿ ವಿಷಯವಾರು ಖಾಲಿ ಹುದ್ದೆಗಳನ್ನು ಪ್ರದರ್ಶಿಸುವ ಸಮಯದಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆಯಲ್ಲಿ ಕಲ್ಯಾಣ ಕರ್ನಾಟಕ ಹಾಗೂ ಉಳಿಕೆ ರಾಜ್ಯ ವೃಂದಕ್ಕೆ ಸೇರಿದ ಸಂಖ್ಯೆಯನ್ನು ಹೊರತುಪಡಿಸಿ ಉಳಿದ ಹುದ್ದೆಗಳನ್ನು ಮೇಲಿನ ಕ್ರಮ ಸಂ. 3 ರಿಂದ 5 ರಲ್ಲಿ ತಿಳಿಸಿರುವ ಅನುಪಾತದಲ್ಲಿ, ಪ್ರದರ್ಶಿಸಲಾಗುವುದು.

7. ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ ಹಾಗೂ ಉಳಿಕೆ ರಾಜ್ಯ ವೃಂದದಲ್ಲಿನ ಬೋಧಕರನ್ನು ಸೇವಾ ಜೇಷ್ಠತೆಯನ್ನು ಒಟ್ಟುಗೂಡಿಸಿ ಒಂದೇ ಆದ್ಯತಾ ಪಟ್ಟಿಯನ್ನು (Combined Seniority list) ತಯಾರಿಸಿ ಅದರಂತೆ ಕೌನ್ಸಿಲಿಂಗ್‌ನಲ್ಲಿ, ಅವಕಾಶ ನೀಡಲಾಗುವುದು ಹಾಗೂ ಮೇಲೆ ಕ್ರ.ಸಂ 02 ರಿಂದ 06 ರಲ್ಲಿ ತಿಳಿಸಿರುವಂತೆ ವಿಷಯವಾರು ಖಾಲಿ ಹುದ್ದೆಗಳನ್ನು ಪ್ರದರ್ಶಿಸಲಾಗುವುದು ಹಾಗೂ ಸ್ಥಳ ಆಯ್ಕೆ, ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

8. ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿರುವ **ಪತಿ-ಪತ್ನಿ ಪ್ರಕರಣದ ಬೋಧಕರನ್ನು ಹೊರತುಪಡಿಸಿ** ಉಳಿದ ಬೋಧಕರು ಪ್ರಸ್ತುತ ತಾವು ಲೀನ್ ಹೊಂದಿರುವ ಕಾಲೇಜಿನ ಊರು/ ಪಟ್ಟಣ/ ನಗರವನ್ನು ಹೊರತುಪಡಿಸಿ ಇತರೆಡೆಗಳ Vacancy ಪಟ್ಟಿಯಲ್ಲಿನ ಕಾಲೇಜುಗಳಲ್ಲಿ ಲಭ್ಯವಾಗುವ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

<u>ಉದಾ:</u> ಮಂಗಳೂರು ನಗರದ ಬೋಧಕರು ಮಂಗಳೂರು ನಗರದ ಕಾಲೇಜುಗಳನ್ನು ಹೊರತುಪಡಿಸಿ Vacancy ಪಟ್ಟಿಯಲ್ಲಿನ ಇತರ ಯಾವುದೇ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

9. ಪತಿ-ಪತ್ನಿ ಪ್ರಕರಣದಲ್ಲಿ ಪತಿ/ ಪತ್ನಿ ಕರ್ತವ್ಯನಿರ್ವಹಿಸುತ್ತಿರುವ ಜಿಲ್ಲೆಯಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು. ಅಥವಾ ಒಂದು ವೇಳೆ ಪತಿ/ಪತ್ನಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯ ಬದಲು ಸಮೀಪದ ಜಿಲ್ಲೆ (Neighbouring District) ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಇಚ್ಛಿಸಿದಲ್ಲಿ ಪತಿ/ ಪತ್ನಿ ಕರ್ತವ್ಯನಿರ್ವಹಿಸುತ್ತಿರುವ ಕಾಲೇಜು/ಶಾಲೆ/ಕಛೇರಿಗೆ

Scanned with CamScanner

ಭೌಗೋಳಿಕವಾಗಿ ಹತ್ತಿರದ ಖಾಲಿ ಹುದ್ದೆ ಲಭ್ಯವಿರುವ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

10.ಕ್ರಮ ಸಂಖ್ಯೆ 8 ರಲ್ಲಿರುವಂತೆ ಸ್ಥಳ ಆಯ್ಕೆ ಮಾಡಿಕೊಳ್ಳುವ ಸಮಯದಲ್ಲಿ ಪತಿ/ ಪತ್ನಿ ಕರ್ತವ್ಯನಿರ್ವಹಿಸುತ್ತಿರುವ ಕಾಲೇಜು/ಶಾಲೆ/ಕಛೇರಿಯಿಂದ ಆಯ್ಕೆ ಮಾಡಿಕೊಳ್ಳಲಿರುವ ಕಾಲೇಜಿಗೆ ಇರುವ Ariel Distance ನ್ನು ಪರಿಗಣಿಸಲಾಗುವುದು.

11. ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯಲ್ಲಿ ಅಂಗವೈಕಲ್ಯತೆಯುಳ್ಳ ವ್ಯಕ್ತಿಯ ಪ್ರಕರಣದಡಿ ಅರ್ಜಿ ಸಲ್ಲಿಸಿರುವ ಬೋಧಕರನ್ನು 1. ಅಂಗವೈಕಲ್ಯತೆಯುಳ್ಳ ಬೋಧಕರು 2. ಬೋಧಕರ ಪತಿ/ಪತ್ನಿ, ಮಕ್ಕಳು 3. ಬೋಧಕರ ಅವಲಂಬಿತ ತಂದೆ/ತಾಯಿ ಪ್ರಕರಣಗಳನ್ನು ಅಂಗವೈಕಲ್ಯತೆಯ ಶೇಕಡವಾರನ್ನು ಹೆಚ್ಚಿಂದ ಕಡಿಮೆ (ಅವರೋಹಣ ಕ್ರಮ) ಆಧರಿಸಿ ಕೌನ್ಸಿಲಿಂಗ್ ನಡೆಸಲಾಗುವುದು.

12. ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 01.07.2025 ರಲ್ಲಿ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯಲ್ಲಿ ಅಂಗವೈಕಲ್ಯತೆಯುಳ್ಳ ವ್ಯಕ್ತಿಯ ಪ್ರಕರಣದಡಿ ಮತ್ತು ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಕೋರಿ ಅವಲಂಬಿತ ತಂದೆ / ತಾಯಿಯ ದಾಖಲೆ ಲಗತ್ತಿಸಿ ಕೋರಿಕೆ ಸಲ್ಲಿಸಿರುವ ಬೋಧಕರು ಅಫಿಡವಿಟ್ (Affidavit)ನ್ನು ಸಲ್ಲಿಸಲು ಸೂಚಿಸಲಾಗಿದ್ದು, ನಿಗದಿತ ಅವಧಿಯೊಳಗೆ ಅಫಿಡವಿಟ್ (Affidavit) ಹಾಗೂ ದಾಖಲೆಗಳನ್ನು ಸಲ್ಲಿಸದೇ ಇರುವ ಬೋಧಕರನ್ನು ವಿಶೇಷ ವರ್ಗಾವಣೆಯ ಕೋರಿಕೆ ಮತ್ತು ಕಡ್ಡಾಯ ವರ್ಗಾವಣೆ ವಿನಾಯಿತಿಗೆ ಪರಿಗಣಿಸಿರುವುದಿಲ್ಲ.

13. ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಾಗಿರುವ ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಪಡೆದಿರುವ ಬೋಧಕರು ಸುಳ್ಳು/ತಪ್ಪಾದ ದಾಖಲೆಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಅಂತಹ ಬೋಧಕರ ವರ್ಗಾವಣೆಯನ್ನು ಅನರ್ಹಗೊಳಿಸಿ ಅಂತಹವರ ವಿರುದ್ಧ ನಿಯಮಾನುಸಾರ ಇಲಾಖಾ ಶಿಸ್ತು ಕ್ರಮ ಜರುಗಿಸಲಾಗುವುದು.

14. ವಿಶೇಷ ಪ್ರಕರಣಗಳಡಿ ವರ್ಗಾವಣೆಗೆ ಅರ್ಹರಾಗಿರುವ ಬೋಧಕರು ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಪಡೆದಿರುವ ಬೋಧಕರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ಸಂಬಂಧಪಟ್ಟ ಪ್ರಾಂಶುಪಾಲರಿಗೆ ಕಡ್ಡಾಯವಾಗಿ ಸಲ್ಲಿಸುವುದು.

15. ವರ್ಗಾವಣೆ ನಿಯಮಗಳನ್ವಯ ಬಿ-ವಲಯ (B-Zone) ದಿಂದ ಕೌನ್ಸಿಲಿಂಗ್ ಅನ್ನು ಪ್ರಾರಂಭಿಸಲಾಗುವುದು.

16. ಡಿ ವಲಯದಲ್ಲಿ ಇಂಜಿನಿಯರಿಂಗ್ ಕೋರ್ subject ಗಳಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆ ಮಂಜೂರಾಗಿದ್ದು, ಅದರಲ್ಲಿ ಕಾರ್ಯನಿರತ ಬಲ ಕೇವಲ ಒಂದೇ ಇದ್ದಲ್ಲಿ, ಹಾಗೂ ಸದರಿ ಬೋಧಕ ಸಿಬ್ಬಂದಿಗಳು ಇಚ್ಚಿಸಿ ಅದೇ ಸಂಸ್ಥೆಯಲ್ಲಿ ಮುಂದುವರೆಯುವ ಬಗ್ಗೆ ಅಭಿಮತ ನೀಡಿದಲ್ಲಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಂಸ್ಥೆಯ ಹಿತದೃಷ್ಟಿಯಿಂದ ಸದರಿಯವರಿಗೆ ಪ್ರಸ್ತುತ ವರ್ಗಾವಣೆಯಿಂದ ವಿನಾಯಿತಿ ನೀಡಿ, ಪ್ರಸಕ್ತ ಸಾಲಿಗೆ ಅನ್ವಯಿಸುವಂತೆ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನಲ್ಲಿಯೇ ಮುಂದುವರೆಸಲಾಗುವುದು.

17. ಅಂತಿಮ ಆದ್ಯತಾ ಪಟ್ಟಿಯ ಜೇಷ್ಠತೆಯನ್ವಯ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು ಸಂಬಂಧಿಸಿದ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು.

Scanned with CamScanner

18. ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗೆ ಹಾಗೂ ಕಡ್ಡಾಯ ವರ್ಗಾವಣೆಗೆ ಆದ್ಯತಾಪಟ್ಟಿಯಲ್ಲಿನ ಬೋಧಕರು ವರ್ಗಾವಣಾ ವೇಳಾಪಟ್ಟಿಯಂತೆ Video Conference ಮೂಲಕ ಮಾತ್ರ ಭಾಗವಹಿಸುವುದು.

19. ಕಡ್ಡಾಯ ವರ್ಗಾವಣೆಗೆ ಒಳಪಡುವ ಬೋಧಕರು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿದ್ದು, ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಕಡ್ಡಾಯ ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿ ಪರಿಗಣಿಸಲಾಗುವುದು.

20. ಕಡ್ಡಾಯ ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿನ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಬೋಧಕರು ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online Counseling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಕಡ್ಡಾಯ ವರ್ಗಾವಣೆಯ ಕೌನ್ಸಿಲಿಂಗ್ ಪ್ರಕ್ರಿಯೆಯ ನಂತರ ಲಭ್ಯವಿರುವ ಖಾಲಿ ಹುದ್ದೆಗೆ ಇಲಾಖೆಯಿಂದ ವರ್ಗಾವಣೆ ಮಾಡಲಾಗುವುದು.

21. ವಿಶೇಷ ಪ್ರಕರಣಗಳಡಿ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿ ಅಧ್ಯತಾ ಪಟ್ಟಿಯಲ್ಲಿರುವ ಬೋಧಕರಿಗೆ ಎರಡು ರೌಂಡ್‌ಗಳ ಕೌನ್ಸಿಲಿಂಗ್ ಅವಕಾಶ ಕಲ್ಪಿಸಲಾಗುವುದು. ಮೊದಲನೇ ರೌಂಡ್‌ನಲ್ಲಿ ಕೌನ್ಸಿಲಿಂಗ್‌ಗೆ ಗೈರುಹಾಜರಾದವರನ್ನು ಎರಡನೇ ರೌಂಡ್ ಕೌನ್ಸಿಲಿಂಗ್‌ಗೆ ಪರಿಗಣಿಸುವುದಿಲ್ಲ.

22. ಮೊದಲನೆಯ ರೌಂಡ್ ಕೌನ್ಸಿಲಿಂಗ್‌ಗೆ ಗೈರುಹಾಜರಾದ ವಿಶೇಷ ಪ್ರಕರಣಗಳ ಬೋಧಕರ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಠ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

23. ಮೊದಲನೆಯ ರೌಂಡ್‌ನಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳುವ ಹಾಗೂ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳದೇ ಎರಡನೇ ರೌಂಡ್ ನಲ್ಲಿ ಭಾಗವಹಿಸಲು ಇಚ್ಛಿಸುವ ವಿಶೇಷ ಪ್ರಕರಣಗಳ ಬೋಧಕರಿಗೆ ಎರಡನೇ ರೌಂಡ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು.

24. ಎರಡನೇ ರೌಂಡ್‌ನಲ್ಲಿಯೂ ಸ್ಥಳ ಆಯ್ಕೆ ಮಾಡಿಕೊಳ್ಳದ ಬೋಧಕರಿಗೆ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಠ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

25. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಒಳಪಡಲಿರುವ ಹಾಗೂ ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಿರುವ ಬೋಧಕರು **ಅನುಬಂಧ -1** ರ ವರ್ಗಾವಣೆ ವೇಳಾಪಟ್ಟಿಯಂತೆ online counseling ಪ್ರಕ್ರಿಯೆಯಲ್ಲಿ ಭಾಗವಹಿಸುವುದು.

26. ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವ ಸಮಯದಲ್ಲಿ ಉತ್ತಮ Internet Connectivity ಲಭ್ಯವಿರುವುದನ್ನು ಖಚಿತಪಡಿಸಿಕೊಂಡು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವುದು ಸಂಬಂಧಿಸಿದ ಬೋಧಕರ ಜವಾಬ್ದಾರಿಯಾಗಿರುತ್ತದೆ. ಯಾವುದೇ ಕಾರಣದಿಂದ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ವಿಫಲರಾದಲ್ಲಿ, ಗೈರುಹಾಜರಿಯೆಂದು ಪರಿಗಣಿಸಲಾಗುವುದು.

Scanned with CamScanner

27. ನಿಗದಿ ಪಡಿಸಿದ Time Schedule ನಲ್ಲಿಯೇ ನಿಗದಿಪಡಿಸಿದ ಬೋಧಕರು ಮಾತ್ರವೇ Login ಆಗಿ Audio & Video Mute ಮಾಡಿಕೊಂಡಿರುವುದು. ಅವಶ್ಯವಿದ್ದಾಗ ಮಾತ್ರ Audio & Video on ಮಾಡಿಕೊಂಡು ಕೌನ್ಸಿಲಿಂಗ್ ನಲ್ಲಿ ಭಾಗವಹಿಸತಕ್ಕದ್ದು ಹಾಗೂ ಸ್ಥಳ ಆಯ್ಕೆ ಮಾಡಿಕೊಂಡ ಕೂಡಲೇ Logout ಆಗುವುದು.

28. ಕೌನ್ಸಿಲಿಂಗ್ ಸಮಯದಲ್ಲಿ Login ಆದ ನಂತರ ಸ್ಥಳ ಆಯ್ಕೆ ವಿಷಯವನ್ನು ಹೊರತುಪಡಿಸಿ ಇತರೆ ವಿಷಯಗಳ ಕುರಿತು ಚರ್ಚೆಗೆ ಅವಕಾಶವಿರುವುದಿಲ್ಲ. ಈ ವಿಷಯದ ಉಲ್ಲಂಘನೆಯನ್ನು ದುರ್ನಡತೆಯೆಂದು ಪರಿಗಣಿಸಲಾಗುವುದು.

29. ಆಡಳಿತಾತ್ಮಕ ದೃಷ್ಟಿಯಿಂದ ಕೌನ್ಸಲಿಂಗ್ ನ ಪೂರ್ಣ ಪ್ರಕ್ರಿಯೆಯನ್ನು Video ಮತ್ತು Audio ರೆಕಾರ್ಡ್ ಮಾಡಿಕೊಳ್ಳಲಾಗುವುದು.

Manjunath

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

**ಇವರಿಗೆ,**

ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ.
2. ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಪರಿಷತ್ತು, ,ಬೆಂಗಳೂರು- ಮಾಹಿತಿಗಾಗಿ.
3. ಮಾನ್ಯ ಆಯುಕ್ತರ ಅಪ್ತ ಶಾಖೆಗೆ.
4. ಮಾನ್ಯ ನಿರ್ದೇಶಕರ ಅಪ್ತ ಶಾಖೆಗೆ.
5. ಜಂಟಿ ನಿರ್ದೇಶಕರು (ಆಡಳಿತ) ಅಪ್ತ ಶಾಖೆಗೆ.
6. ಇ-ಆಡಳಿತ ವಿಭಾಗಕ್ಕೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.
7. ಕಛೇರಿ ಪ್ರತಿ

Scanned with CamScanner

## TRANSFER COUNSELING SCHEDULE 2025-26

Category -I : Teaching Staff

Online Counselling ಪ್ರಕ್ರಿಯೆಯಲ್ಲಿ ಕಾಲೇಜು/ ಸಂಸ್ಥೆಯವರು ಈ ಕೆಳಕಂಡ ದಿನಾಂಕಗಳಿಗೆ ನೀಡಲಾಗಿರುವ Google Meet Login Link ಮೂಲಕ ಭಾಗವಹಿಸುವುದು.

| |
|---|
| 08.07.2025 https://meet.google.com/roa-ayjm-dcy |
| 09.07.2025 https://meet.google.com/bmf-awon-gnq |
| 10.07.2025 https://meet.google.com/nxy-vjck-vqu |
| 11.07.2025 https://meet.google.com/qia-zthn-amf |

### Government Engineering College

| Special Cases | | | Round-1 : Date & Time Slot | Round -2 : Date & Time Slot |
|---|---|---|---|---|
| Physically Challenged/PWD | | | 08.07.2025 10.30am to11.30pm | 08.07.2025 12.000 noon to 01.30pm |
| Zone | Priority List | Waiting List | | |
| B | 0 | 1 | | |
| C | 1 | 0 | | |
| D | 1 | 0 | | |
| A | 0 | 0 | | |
| Total | 2 | 1 | | |
| Serious Ailment Cases | | | | |
| Zone | Priority List | Waiting List | | |
| B | 0 | 0 | | |
| C | 0 | 0 | | |
| D | 1 | 0 | | |
| A | 0 | 0 | | |
| Total | 1 | 0 | | |
| Widows/Single Parent | | | | |
| Zone | Priority List | Waiting List | | |
| B | 0 | 0 | | |
| C | 1 | 0 | | |
| D | 0 | 0 | | |
| A | 0 | 0 | | |
| Total | 1 | 0 | | |
| Spouse Cases | | | | |
| Zone | Priority List | Waiting List | | |
| B | 1 | 0 | | |
| C | 5 | 3 | | |
| D | 1 | 0 | | |
| A | 1 | 0 | | |
| Total | 8 | 3 | | |

| Compulsory Transfer Cases | | | |
|---|---|---|---|
| Zone | Priority List | Waiting List | Date & Time Slot |
| B | 7 | 0 | 08.07.2025 2.30pm to 4.30pm |
| C | 17 | 0 | |
| D | 3 | 0 | |
| A | 3 | 0 | |
| Total | 30 | 0 | |

Scanned with CamScanner

| Government Junior Technical School | | | | |
|---|---|---|---|---|
| Special Cases | | | Round-1 : Date & Time Slot | Round -2 : Date & Time Slot |
| Physically Challenged/PWD | | | 08.07.2025 4.30pm to 5.00pm | 08.07.2025 5.00 pm to 5.15 pm |
| Zone | Priority List | Waiting List | | |
| B | 0 | 1 | | |
| C | 1 | 0 | | |
| **Total** | **1** | **1** | | |
| Spouse Cases | | | | |
| Zone | Priority List | Waiting List | | |
| B | 1 | 1 | | |
| C | 0 | 0 | | |
| **Total** | **1** | **1** | | |

| Compulsory Transfer Cases | | | |
|---|---|---|---|
| Zone | Priority List | Waiting List | Date & Time Slot |
| B | 3 | 0 | 08.07.2025 5.15pm to 5.30pm |
| C | 0 | 0 | |
| **Total** | **3** | **0** | |

Scanned with CamScanner

# Government Polytechnic

| Special Cases | | | Round-1 : Date & Time Slot | Round -2 : Date & Time Slot |
|---|---|---|---|---|
| Physically Challenged/PWD | | | 09-07-2025<br>10.30am to 1.30 pm | 09-07-2025<br>2.30 pm to 5.30 pm |
| Zone | Priority List | Waiting List | | |
| B | 5 | 0 | | |
| C | 5 | 0 | | |
| D | 11 | 1 | | |
| A | 2 | 1 | | |
| Total | 23 | 0 | | |
| Serious Ailment Cases | | | | |
| Zone | Priority List | Waiting List | | |
| B | 2 | 0 | | |
| C | 1 | 0 | | |
| D | 3 | 0 | | |
| A | 1 | 0 | | |
| Total | 7 | 0 | | |
| Widows/Single Parent | | | | |
| Zone | Priority List | Waiting List | | |
| B | 3 | 0 | | |
| C | 0 | 0 | | |
| D | 0 | 0 | | |
| A | 0 | 0 | | |
| Total | 3 | 0 | | |
| Spouse Cases | | | | |
| Zone | Priority List | Waiting List | | |
| B | 12 | 0 | | |
| C | 13 | 2 | | |
| D | 29 | 4 | | |
| A | 3 | 0 | | |
| Total | 57 | 6 | | |

**Compulsory Transfer Cases**

| Zone | Priority List | Waiting List | Date & Time Slot |
|---|---|---|---|
| B | 51 | 0 | 10.07.2025 10.30 am to 01.30pm |

**Compulsory Transfer Cases**

| Zone | Priority List | Waiting List | Date & Time Slot |
|---|---|---|---|
| C | 57 | 0 | 10.07.2025<br>02.30pm to 05.30pm |

**Compulsory Transfer Cases**

| Zone | Priority List | Waiting List | Date & Time Slot |
|---|---|---|---|
| D | 73 | 0 | 11.07.2025<br>10.30 am to 01.30 pm |

**Compulsory Transfer Cases**

| Zone | Priority List | Waiting List | Date & Time Slot |
|---|---|---|---|
| A | 19 | 0 | 11.07.2025<br>2.30pm to 03.30 pm |

Scanned with CamScanner